<u>ಸಾಕ್ಷಿಗೆ ದಿನಾಂಕ *25 -10-2025* ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>

ಪಾಟೀ ಸವಾಲುಃ ವಾದಿಯರ ಪರ ಶ್ರೀ ಪಿ ಆರ್ ಎಸ್ ವಕೀಲರಿಂದ

ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರಕ್ಕೆ ನಾನು ಮಾಹಿತಿಯನ್ನು ನೀಡಿರುತ್ತೇನೆ. ನನಗೆ ವಾದಿಯರ ಮತ್ತು ಪ್ರತಿವಾದಿಯರ ಮನೆತನದ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ. ವಾದಿಯರ ಮತ್ತು ಪ್ರತಿವಾದಿ ನಂ. 1 ರಿಂದ 8 ಮತ್ತು 13 ರಿಂದ 16 ರವರ ಮನೆತನದ ಮೂಲ ಪುರುಷ ರುದ್ರಪ್ಪ ಗೋಕಾವಿ. ರುದ್ರಪ್ಪ ರವರ ಹೆಂಡತಿಯ ಹೆಸರು ಗೊತ್ತಿರುವುದಿಲ್ಲ. ರುದ್ರಪ್ಪ ರವರಿಗೆ ಒಬ್ಬ ಹೆಣ್ಣುಮಗಳು ಮತ್ತು ಮೂರು ಜನ ಗಂಡು ಮಕ್ಕಳು ಇರುತ್ತಾರೆ. ಹೆಣ್ಣು ಮಗಳ ಹೆಸರು ಶಂಕ್ರವ್ವ. ಶಂಕ್ರವ್ವ ರವರ ಬಗ್ಗೆ ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆಸಿರುವುದಿಲ್ಲ. ಶಂಕ್ರವ್ವ ರವರ ಮದುವೆಯು 1956 ರಲ್ಲಿ ಆಗಿರುತ್ತದೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಶಂಕ್ರವ್ವ ರವರು 1936 ರಲ್ಲಿ ಜನಿಸಿದ್ದು ಮತ್ತು 2016 ರಲ್ಲಿ ತೀರಿಕೊಂಡಿರುತ್ತಾಳೆ ಎಂದು ನಮೂದಿಸಿರುತ್ತೇನೆ. ಶಂಕ್ರವ್ವ ರವರು ತೀರಿಕೊಂಡ ಬಗ್ಗೆ ಅವರ ಮರಣ ಪ್ರಮಾಣ ಪತ್ರವನ್ನು ನೋಡಿರುವುದಿಲ್ಲ. ಶಂಕ್ರವ್ವ ರವರ ಮದುವೆ ಆದಾಗ ನಾನು 4 ವರ್ಷದವನು ಇದ್ದು, ನನಗೆ ಶಂಕ್ರವ್ವ ರವರ ಮದುವೆ ಯಾವಾಗ ಆಗಿದೆ ಎಂದು ಗೊತ್ತಿರುವುದಿಲ್ಲ ಎಂದರೆ ಸಾಕ್ಷಿದಾರರು ರುದ್ರಪ್ಪ ರವರು ಸಮಾಜದ ಹಿರಿಯರು ಇದ್ದು , ನನಗೆ ಹೇಳಿರುತ್ತಾರೆ ಎಂದು ಹೇಳುತ್ತಾರೆ. ನಾನು ನನ್ನ ಸ್ವಂತ ಪ್ರಕರಣಗಳಲ್ಲಿಮತ್ತು ಇತರೇ ಪ್ರಕರಣಗಳಲ್ಲಿ ಸಾಕ್ಷ್ಯ ಹೇಳಲು ಮಾನ್ಯ ನ್ಯಾಯಾಲಯಕ್ಕೆ ಬಂದಿರುತ್ತೇನೆ. ಶಂಕ್ರವ್ವ ರವರ ಮದುವೆ ಸಮಯದಲ್ಲಿ ವರದಕ್ಷಿಣೆ ವರೋಪಚಾರ ಕೊಟ್ಟು ಮದುವೆ ಮಾಡಿರುತ್ತಾರೆ ಎಂದು ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸಾಕ್ಷಿದಾರರು ರುದ್ರಪ್ಪ ರವರು ಹೇಳಿದ ಮೇರೆಗೆ ನನಗೆ ತಿಳಿದಿರುತ್ತದೆ ಎಂದು ಹೇಳುತ್ತಾರೆ. ಶಂಕ್ರವ್ವ ರವರು ರುದ್ರಪ್ಪ ರವರ ಹತ್ತಿರ ಬಂದು ತಮ್ಮ ಪಾಲು ಕೇಳುತ್ತಿದ್ದರು ಎಂದರೆ ಸಾಕ್ಷಿದಾರರು ಅವರು ಕೇಳಿರುವುದಿಲ್ಲ ಎಂದು ಹೇಳುತ್ತಾರೆ.

ಚನ್ನಬಸಪ್ಪ ರವರು ತೀರಿಕೊಂಡಿರುತ್ತಾರೆ. ಚನ್ನಬಪ್ಪ ರವರಿಗೆ 5 ಜನ ಹೆಣ್ಣುಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. ಅವರ ಹೆಂಡತಿಯ ಹೆಸರು ಬಸವ್ವ. ರುದ್ರಪ್ಪ ರವರು ವಾದಿಯರು ಮತ್ತು ಪ್ರತಿವಾದಿ ನಂ. 1 ರಿಂದ 8 ಮತ್ತು 13 ರಿಂದ 16 ರವರು ಏಕತ್ರದಲ್ಲಿ ಇದ್ದಾಗ ಮೃತರಾಗಿರುತ್ತಾರೆ ಎಂದರೆ ಸರಿಯಲ್ಲ. ರುದ್ರಪ್ಪ ರವರು ಏಕತ್ರದಲ್ಲಿ ಇದ್ದಾಗ ತೀರಿಕೊಂಡಿದ್ದರಿಂದ ವಾದಿಯರು ಮತ್ತು ಪ್ರತಿವಾದಿ ನಂ. 1 ರಿಂದ 8 ಮತ್ತು 13 ರಿಂದ 16 ರವರು ಮಾಲಕರು ಆಗುತ್ತಾರೆ

ಎಂದರೆ ಸರಿಯಲ್ಲ. ಗೋಕಾವಿ ಮನೆತನದ ಕುಲ ಕಸಬು ನೇಕಾರಿಕೆ. ದಾವಾ ಆಸ್ತಿಗಳು ರುದ್ರಪ್ಪ ರವರಿಗೆ ಸ್ವಾತಂತ್ರ್ಯ ಯೋಧ ನಾತೆಯಿಂದ 4 ಎಕರೆ ಭೂಮಿಯನ್ನು ತುಳಸಿಗೇರಿ ಗ್ರಾಮದಲ್ಲಿ ಸರಕಾರದವರು ನೀಡಿದ್ದರಿಂದ ಬಂದಿರುತ್ತವೆ. ಸರ್ವೇನಂ. 213/ಸಿ ಒಂದನ್ನು ಬಿಟ್ಟು ಉಳಿದ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಮತ್ತು ರುದ್ರಪ್ಪ ರವರು ಸ್ವಂತ ದುಡಿದು ಖರೀದಿ ಹಿಡಿದ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಕೂಡುಕುಟುಂಬದ ಆಸ್ತಿಗಳು ಎಂದರೆ ಸರಿಯಲ್ಲ. ದಾವಾ ಆಸ್ತಿಗಳಿಗೆ ಸಂಬಂದಪಟ್ಟಂತೆ ಗೋಕಾವಿ ಮನೆತನದಲ್ಲಿ ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲುವಾಟ್ನಿ ಆಗುವ ಸಮಯದಲ್ಲಿ ನಾನು ಮತ್ತು ನಮ್ಮ ಹಿರಿಯರು ಇದ್ದೇವು. ನಾನು ಪಾಲುವಾಟ್ನಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಚನ್ನಬಸಪ್ಪ ರವರು ನೌಕರಿ ಮಾಡುತ್ತಿದ್ದರು. ರುದ್ರಪ್ಪ ಮತ್ತು ಚನ್ನಬಸಪ್ಪ ರವರು ತೀರಿಕೊಂಡ ನಂತರ ಚನ್ನಬಸಪ್ಪ ರವರ ಹೆಂಡತಿ ಮತ್ತು ಮಕ್ಕಳು ಮತ್ತು ರುದ್ರಪ್ಪ ರವರ ಇತರೇ ಮಕ್ಕಳ ನಡುವೆ ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲುವಾಟ್ನಿ ಆಗುವಾಗ ವಾದಿಯರು ಮತ್ತು ಪ್ರತಿವಾದಿ ನಂ. 3 ರವರು ಇದ್ದರು. ಪಾಲುವಾಟ್ನಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಪಾಲುವಾಟ್ನಿ ಆದಾಗ ಸರ್ವೆ ನಂ. 117, 213/ಸಿ, 281 ಎ ಮತ್ತು ಬಿ ಇದರಲ್ಲಿ ಪ್ಲಾಟ ನಂ.11 ಮತ್ತು 14 ಇವುಗಳು ಈರಪ್ಪ ರವರ ಪಾಲಿಗೆ ಬಂದಿರುತ್ತವೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಪಾಲುವಾಟ್ನಿ ಆದಾಗ 2 ನೇ ಪ್ರತಿವಾದಿ ಈರಣ್ಣ ರವರಿಗೆ ಸರ್ವೆ ನಂ. 281 ಎ ಮತ್ತು ಬಿ ಇದರಲ್ಲಿ ಪ್ಲಾಟ ನಂ.11 ಎ ಮತ್ತು 40*20 ಖುಲ್ಲಾ ಜಾಗ ಮತ್ತು 5 ನೇ ಪ್ರತಿವಾದಿಯ ಗಂಡ ಚನ್ನಪ್ಪ ಇವರ ಪಾಲಿಗೆ ಆಮೀನಗಡ ಗ್ರಾಮದ ಮನೆ ನಂ. 479 ಬಂದಿರುತ್ತದೆ ಎಂದು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಸುಳ್ಳಾಗಿ ಬರೆಸಿರುತ್ತೇನೆ ಎಂದರೆ ಸರಿಯಲ್ಲ. 1995 ರಲ್ಲಿ ಗುರುಹಿರಿಯರ ಸಮಕ್ಷಮ ಪಾಲುವಾಟ್ನಿ ಕುರಿತು ವಾಟ್ನಿಸ್ಮರಣಾರ್ಥ ಟಿಪ್ಪಣಿ ಆಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಕುರಿತು ವಾದಿಯರಿಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿ ವಾದಿ ನಂ. 1 ರಿಂದ 8 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರ ಮದುವೆಯನ್ನು ಈರಪ್ಪ ಗೊಕಾವಿ ಯವರು ತಮ್ಮ ಸ್ವಂತ ಖರ್ಚಿನಿಂದ ಮಾಡಿರುವುದಿಲ್ಲ ಮತ್ತು ಕೂಡು ಕುಟುಂಬದ ಆದಾಯದಿಂದ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಪ್ರತಿವಾದಿಯರ ಮದುವೆಯ ಖರ್ಚಿನ ಲಿಸ್ಟನ್ನು

ನೋಡಿರುತ್ತೀರಾ ಎಂದರೆ ಸಾಕ್ಷಿದಾರರು ನೋಡಿರುವುದಿಲ್ಲ ಎಂದು ಹೇಳುತ್ತಾರೆ. 1995 ರಲ್ಲಿ ಆದ ಪಾಲುವಾಟ್ನಿಯು ಬೇಕಾಯ್ದೇಶೀರ ಇರುತ್ತದೆ ಎಂದರೆ ಸರಿಯಲ್ಲ. ಅಮೀನಗಡ ಗ್ರಾಮದ ಸರ್ವೆ ನಂ. 117 ಕ್ಷೇತ್ರ 6 ಎಕರೆ 16 ಗುಂಟೆ ಇದರಲ್ಲಿ 4 ನೇ ಪ್ರತಿವಾದಿಯ ಗಂಡ ಈರಪ್ಪ ರವರು ತಮ್ಮ ಪಾಲಿಗೆ 3 ಎಕರೆ 8 ಗುಂಟೆ ಕ್ಷೇತ್ರವನ್ನು ಇಟ್ಟುಕೊಂಡು ಉಳಿದ 3 ಎಕರೆ 8 ಗುಂಟೆ ಕ್ಷೇತ್ರವನ್ನು ಚನ್ನಪ್ಪ ರವರ ಪಾಲಿಗೆ ಕೊಟ್ಟಿರುತ್ತಾರೆ ಮತ್ತು ಅವರಿಗೆ ಕಾಯ್ದೇಬದ್ದ ಮಾಲೀಕತ್ವ ಇರಲಿಲ್ಲ ಎಂದರೆ ಸಾಕ್ಷಿದಾರರು ಈರಪ್ಪ ರವರಿಗೆ ಕಾಯ್ದೇಬದ್ದ ಮಾಲೀಕತ್ವಇತ್ತು ಮತ್ತು ಕಾಯ್ದೇಬದ್ದವಾಗಿಯೇ ಮಾಡಿರುತ್ತಾರೆ ಎಂದು ಹೇಳುತ್ತಾರೆ. ರುದ್ರಪ್ಪ ರವರು ಸರ್ವೆ ನಂ. 213/1 ಸಿ ಯನ್ನು ಈರಪ್ಪ ರವರಿಗೆ ಬಿಟ್ಟುಕೊಟ್ಟಿರುತ್ತಾರೆ. ರುದ್ರಪ್ಪ ರವರು ಈರಪ್ಪ ರವರಿಗೆ ಬಿಟ್ಟುಕೊಟ್ಟಿರುವುದಿಲ್ಲ ಮತ್ತು ಈರಪ್ಪ ರವರು ತಾವೊಬ್ಬರೇ ರುದ್ರಪ್ಪ ರವರ ವಾರಸುದಾರರು ಎಂದು ತಮ್ಮ ಹೆಸರನ್ನು ಸೇರಿಸಿ ಸದರಿ ಜಮೀನನ್ನು ಗೋವಿಂದಪ್ಪ ಒಂಟುಗೊಡಿ ಎನ್ನುವವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನಿಂದ ಬಂದ ಹಣದಿಂದ ಈರಣ್ಣ ರವರ ಹೆಸರಿನಲ್ಲಿ ಬಿಜಾಪೂರದಲ್ಲಿ ನಿವೇಶನ ಖರೀದಿಸಿ ಅದರಲ್ಲಿ ಮನೆ ಕಟ್ಟಿಸಿ ಈರಣ್ಣ ರವರಿಗೆ ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಕುರಿತು ದಾಖಲೆಗಳನ್ನು ನೋಡಿರುತ್ತೇನೆ. ನಾನು ದಾಖಲೆಯನ್ನು ನೋಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತುಳಸಿಗೇರಿ ಗ್ರಾಮದ ಜಮೀನನ್ನು ಮಾರಾಟ ಮಾಡಲು ಈರಪ್ಪ ರವರಿಗೆ ಮಾಲೀಕತ್ವದ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು ಪ್ಲಾಟ ನಂ. 11 ನ್ನು ಮಾರಾಟ ಮಾಡಿದ ಬಗ್ಗೆ ವಾದಿಯರಿಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. 4 ಮತ್ತು 5 ನೇ ಪ್ರತಿವಾದಿಯರು ವಾದಿಯರಿಗೆ ತಿಳಿಸಲಾರದೇ ಸರ್ವೆ ನಂ. 317/2 ಮತ್ತು ಸರ್ವೇ ನಂ. 317/1 ಇವುಗಳನ್ನು ವಸತಿ ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿಯು 90 ರಿಂದ 95 ಲಕ್ಷ ರೂ.ಗಳನ್ನು ಖರ್ಚು ಮಾಡಿ ಭೂ ಪರಿವರ್ತನೆ ಮಾಡಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಖರ್ಚು ಮಾಡಿದ ಬಗ್ಗೆ ದಾಖಲೆಗಳನ್ನು ನಾನು ಸ್ವತಃ ನೋಡಿರುತ್ತೇನೆ. ನಾನು ದಾಖಲೆಗಳನ್ನು ನೋಡಿರುವುದಿಲ್ಲ ಮತ್ತು 6 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 4 ನೇ ಪ್ರತಿವಾದಿ ಮತ್ತು ಅವರ ಗಂಡ ದಿನಾಂಕ 02-09-2008 ರಂದು ಮೃತ್ಯು ಪತ್ರವನ್ನು ಮಾಡಲು ಅವರಿಗೆ ಹಕ್ಕು ಇರಲಿಲ್ಲ ಎಂದರೆ ಸಾಕ್ಷಿದಾರರು ಅವರಿಗೆ ಹಕ್ಕು

**ಇತ್ತು ಹಾಗಾಗಿ ಮೃತ್ಯು ಪತ್ರವನ್ನು ಮಾಡಿರುತ್ತಾರೆ ಎಂದು ಹೇಳುತ್ತಾರೆ. ಅವರು ಮಾಡಿಕೊಂಡ ಮೃತ್ಯು ಪತ್ರವು ದಾವಾದ ಆಸ್ತಿಗಳಿಗೆ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು DW-3 ರವರು ಅಮೀನಗಡದ ಶಿವಾಚಾರ್ಯ ಸಮಾಜದ ಹಿರಿಯರು ಎಂದರೆ ಸರಿ. ನಾವು ವಾದಿಯರಿಗೆ ಸದರಿ ದಾವೆಯನ್ನು ಹಿಂದಕ್ಕೆ ತೆಗೆದುಕೊಳ್ಳಿ ಎಂದು ಹೇಳಿದ್ದು, ವಾದಿಯರು ಸದರಿ ದಾವೆಯನ್ನು ಹಿಂದೆ ತೆಗೆದುಕೊಳ್ಳದೇ ಇದ್ದ ಕಾರಣ ಅವರ ಮೇಲೆ ಸಿಟ್ಟಾಗಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಯ ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರಿಗೆ ಪಾಲು ಕೊಡಬಾರದು ಎಂದು ಅವರ ವಿರುದ್ದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.**

**ಪಾಟೀ ಸವಾಲು ಃ 10 ರಿಂದ 12 ಪ್ರತಿವಾದಿಯರ ಪರ ವಕೀಲರು ಗೈರುಹಾಜರಾಗಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲು ಃ 9 ನೇ ಪ್ರತಿವಾದಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.**

**ಪಾಟೀ ಸವಾಲು ಃ 13 ರಿಂದ 16 ನೇ ಪ್ರತಿವಾದಿಯರ ಪರ ವಕೀಲರು ಸಮಯ ಕೋರಿರುತ್ತಾರೆ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ)

ಓ. ಹೇ. ಕೇ. ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಹುನಗುಂದ.